| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 54 ] [ Total No. of Printed Pages : 24

**ಸಂಕೇತ ಸಂಖ್ಯೆ : 33-K** **ವಿಷಯ : ದ್ವಿತೀಯ ಭಾಷೆ — ಕನ್ನಡ**

**Code No. : 33-K** **Subject : Second Language — KANNADA**

ದಿನಾಂಕ : 11. 04. 2012 ] [ Date : 11. 04. 2012

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-30 A.M. to 1-15 P.M

ಪರಮಾವಧಿ ಅಂಕಗಳು : 100 ] [ Max. Marks : 100

## FOR OFFICE USE ONLY

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| | | | | | | | | ***Total Marks*** | |

| | | | |
|---|---|---|---|
| **Total Marks in words** | | **Grand Total** | |

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

15 × 1 = 15

1. 'ನೀವೊಬ್ರೆ' ಈ ಪದದ ಗ್ರಾಂಥಿಕ ರೂಪ ಯಾವುದು ?

(ಎ) ನೀ ಒಬ್ಬನೆ (ಬಿ) ನೀವಿಬ್ಬರೆ

(ಸಿ) ನೀವು ಒಬ್ಬರೆ (ಡಿ) ನೀ ಒಬ್ಬರೆ

*ಉತ್ತರ :* ______________________________

2. ಈ ಕೆಳಗಿನ ಪದಗಳಲ್ಲಿ ಯಾವುದು ಗುಂಪಿಗೆ ಸೇರುವುದಿಲ್ಲ ?

(ಎ) ಪಿಸಿಪಿಸಿ (ಬಿ) ಬಿರಬಿರ

(ಸಿ) ಸುತ್ತಮುತ್ತ (ಡಿ) ಮಟಮಟ

*ಉತ್ತರ :* ______________________________

3. 'ಓದುವನು' ಈ ಪದ ಯಾವ ಕಾಲದಲ್ಲಿದೆ ?

(ಎ) ಭೂತ ಕಾಲ (ಬಿ) ವರ್ತಮಾನ ಕಾಲ

(ಸಿ) ಭವಿಷ್ಯತ್ ಕಾಲ (ಡಿ) ಭೂತಕೃದ್ವಾಚಕ ಕಾಲ

ಉತ್ತರ : ______________________________

4. 'ಸೂರ್ಯೋದಯ' ಈ ಪದವನ್ನು ಬಿಡಿಸಿ ಬರೆದಾಗ

(ಎ) ಸೂರ್ಯ + ದಯ (ಬಿ) ಸೂರ್ಯ + ಉದಯ

(ಸಿ) ಸೂರ್ಯ + ಓದಯ (ಡಿ) ಸೂರ್ಯ + ಊದಯ

ಉತ್ತರ : ______________________________

5. ಇದು ಷಷ್ಠೀ ವಿಭಕ್ತಿ ಪ್ರತ್ಯಯ

(ಎ) ಅನ್ನು (ಬಿ) ಇಂದ

(ಸಿ) ಉ (ಡಿ) ಅ

ಉತ್ತರ : ______________________________

6. 'ಮಗು' ಈ ಪದದ ಬಹುವಚನ ರೂಪ

(ಎ) ಮಗುಗಳು (ಬಿ) ಮಗಳು

(ಸಿ) ಮಕ್ಕಳು (ಡಿ) ಮಕ್ಕಳುಗಳು

ಉತ್ತರ : ______________________________

7. 'ಸ್ತಂಭ' ಈ ಶಬ್ದದ ತದ್ಭವ ರೂಪ

(ಎ) ಸ್ಥಂಬ (ಬಿ) ಕಂಬ

(ಸಿ) ಸಾಂಬ (ಡಿ) ತಂಬ

ಉತ್ತರ : ______________________________

8. ಕನ್ನಡ ವರ್ಣಮಾಲೆಯಲ್ಲಿರುವ ವ್ಯಂಜನಾಕ್ಷರಗಳು ಎಷ್ಟು ?

(ಎ) ಇಪ್ಪತ್ತೈದು (ಬಿ) ಮೂವತ್ನಾಲ್ಕು

(ಸಿ) ಹದಿಮೂರು (ಡಿ) ನಲವತ್ತೊಂಭತ್ತು

ಉತ್ತರ : __________

9. ನೀರು <u>ಜುಳುಜುಳು</u> ಎಂದು ಹರಿಯುತ್ತಿದೆ. ಅಡಿಗೆರೆ ಎಳೆದ ಪದ ಇದಕ್ಕೆ ಉದಾಹರಣೆಯಾಗಿದೆ

(ಎ) ಜೋಡಿನುಡಿ (ಬಿ) ದ್ವಿರುಕ್ತಿ

(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು

ಉತ್ತರ : __________

10. 'ಇರುಳು' ಇದರ ಸಮಾನಾರ್ಥಕ ಪದ

(ಎ) ಹಗಲು (ಬಿ) ಸಾಯಂಕಾಲ

(ಸಿ) ಬೆಳಿಗ್ಗೆ (ಡಿ) ರಾತ್ರಿ

ಉತ್ತರ : __________

11. 'ನಾನು + ಇಂದು' ಇದನ್ನು ಕೂಡಿಸಿ ಬರೆದಾಗ

(ಎ) ನಾನಿಂದು (ಬಿ) ನಾನೆಂದು

(ಸಿ) ನಾನೆ ಎಂದು (ಡಿ) ನಾ ಇಂದು

ಉತ್ತರ : __________

12. 'ಕನಸು' ಇದರ ವಿರುದ್ಧಾರ್ಥಕ ಪದ

(ಎ) ಸೊಗಸು (ಬಿ) ನನಸು

(ಸಿ) ತಿನಿಸು (ಡಿ) ನೆನೆಸು

ಉತ್ತರ : __________

13. ಈ ಕೆಳಗಿನ ಪದಗಳಲ್ಲಿ ಶುದ್ಧರೂಪ

(ಎ) ಕ್ರಷ್ಣ (ಬಿ) ಕ್ರಿಷ್ಣ

(ಸಿ) ಕ್ರುಷ್ಣ (ಡಿ) ಕೃಷ್ಣ

*ಉತ್ತರ :* ______________________________

14. 'ಲೇಖಕ' ಈ ಪದದ ಅನ್ಯಲಿಂಗರೂಪ

(ಎ) ಲೇಖನಿ (ಬಿ) ಲೇಖಕಿ

(ಸಿ) ಕವಿ (ಡಿ) ಲೇಖಕರು

*ಉತ್ತರ :* ______________________________

15. 'ಶೇಖರ' ಇದು ಯಾವ ನಾಮಪದಕ್ಕೆ ಉದಾಹರಣೆಯಾಗಿದೆ ?

(ಎ) ರೂಢ (ಬಿ) ಅನ್ವರ್ಥಕ

(ಸಿ) ಅಂಕಿತ (ಡಿ) ಭಾವ

*ಉತ್ತರ :* ______________________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ರಾಜಕುಮಾರ ತನ್ನ ...................................................................... ತಾಯಿಯೆಂದು ಭಾವಿಸಿಕೊಂಡ.

17. ...................................................................... ನು ಕೃಷ್ಣದೇವರಾಯನ ಮಹಾಮಂತ್ರಿಯಾಗಿದ್ದನು.

18. ರಾಮಬಾಡ ಪ್ರದೇಶದ ಕಿರುದಾರಿಯನ್ನು ...................................................................... ಎಂದು ಕರೆಯುತ್ತಾರೆ.

19. ಗಾಂಧೀಜಿಯವರನ್ನು ...................................................................... ತಂದೆ ಎಂದು ಕರೆಯುತ್ತಾರೆ.

20. ಬಡವರ ಜೀವನ ...................................................................... ಸ್ವತ್ತು.

21. 'ಅ' ಪಟ್ಟಿಯಲ್ಲಿನ ಪದಗಳಿಗೆ ಸರಿಹೊಂದುವ ಪದಗಳನ್ನು 'ಬ' ಪಟ್ಟಿಯಿಂದ ಆರಿಸಿ, ಹೊಂದಿಸಿ ಬರೆಯಿರಿ : $5 \times 1 = 5$

| ಅ | | ಬ | |
|---|---|---|---|
| i) | ಜೋಡಿನುಡಿ | ಅ) | ನೋಡು |
| ii) | ಸರ್ವನಾಮ ಪದ | ಆ) | ಹಳಗನ್ನಡ |
| iii) | ಧಾತು | ಇ) | ನೀರುನಿಡಿ |
| iv) | ದ್ವಿರುಕ್ತಿ | ಈ) | ಸಮಾನಾರ್ಥಕ ಪದ |
| v) | ಆದೇಶ ಸಂಧಿ | ಉ) | ಕೇಳುಕೇಳು |
| | | ಊ) | ಅವರು |

*ಉತ್ತರಗಳು :* i) ______________________

ii) ______________________

iii) ______________________

iv) ______________________

v) ______________________

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ : $8 \times 1 = 8$

22. ಭಾರತೀಯರು ಮಲಗುವ ಮುನ್ನ ಭೂಮಿಗೆ ಏನೆಂದು ಹೇಳುತ್ತಾರೆ ?

______________________

______________________

23. ಗಾಂಧೀಜಿ ಯಾವುದರ ಸೂತ್ರಧಾರ ?

______________________

______________________

24. 'ದಂಡಿ' ಎಂದರೇನು ?

25. ಧಾರಾಪುರಿಯ ಮಹಾಕವಿಯ ಹೆಸರು ಬರೆಯಿರಿ.

26. ಕಾರಂತರು ಯಾರ ಬಳಿಯಲ್ಲಿ ಶಿಷ್ಯವೃತ್ತಿ ಗಿಟ್ಟಿಸಿದರು ?

27. 'ಹಡಗದ ಚಂದ' ಪದ್ಯವನ್ನು ಬರೆದ ಕವಿಯ ಹೆಸರೇನು ?

28. ರಾಘಣ್ಣ ತಲೆಗೆ ಕೈಹೊತ್ತು ಕುಳಿತುಕೊಳ್ಳಲು ಕಾರಣವೇನು ?

29. ಭರತ ಭೂತಳಕ್ಕೆ ಸಿಂಗಾರವಾದದ್ದು ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $12 \times 2 = 24$

30. ಭರತಕುಮಾರನಿಗೆ ಸೂರ್ಯ ಮಾಡಿದ ಸಹಾಯವೇನು ?

31. ಕುವೆಂಪು ಮತ್ತು ಬೇಂದ್ರೆ ಕವಿಗಳ ಸಾಹಿತ್ಯವನ್ನು ಪ್ರಕೃತಿಯೊಂದಿಗೆ ಹೇಗೆ ಹೋಲಿಸಲಾಗಿದೆ ?

32. ಪಂಚಪರ್ವತಗಳು ಯಾವುವು ? ಅವು ಎಲ್ಲಿವೆ ?

33. ಗಾಂಧೀಜಿಯವರನ್ನು 'ಹಿರಿಯ ತಂದೆ' ಎಂದು ಏಕೆ ಕರೆಯಲಾಗಿದೆ ?

34. ಜನರ ಮನಸ್ಸನ್ನು ತಿರುಗಿಸಲು ತಗಡೂರ ರಾಮಚಂದ್ರರಾಯರು ಏನು ಮಾಡುತ್ತಿದ್ದರು ?

35. ಕವಿ ಹೊರೆಯಾಲ ದೊರೆಸ್ವಾಮಿ ಅವರ ಪ್ರಕಾರ ಯುಗಾದಿಯ ಆಚರಣೆ ಯಾರ ಪಾಲಿಗೆ ಬೇವಾಗಿದೆ ? ಏಕೆ ?

36. ಮರಿಗೌಡರ ಕಳಕಳಿ ಮತ್ತು ಹೇರಾಸೆಗಳು ಯಾವುವು ?

37. ತಿರುಪತಿಯಲ್ಲಿ ಹಿರಿಯರು ಯಾವುದಕ್ಕೆ ಕವಿಗಳ ಒಪ್ಪಿಗೆ ಕೇಳಿದರು ?

38. ಲಾಲ್‌ಬಾಗಿನ ಹುಟ್ಟು ಮತ್ತು ಶೈಶವದ ಬಗ್ಗೆ ದೇ. ಜವರೇಗೌಡರ ಅಭಿಪ್ರಾಯವೇನು ?

39. ಪುರಂದರದಾಸರು ಮನುಷ್ಯರಿಗೆ ಏನೆಂದು ಎಚ್ಚರಿಕೆ ನೀಡಿದ್ದಾರೆ ?

40. ಮಳೆಕೊಯ್ಲಿನ ಕ್ರಮಗಳಾವುವು ?

41. ಭರತೇಶನು ಹೇಗೆ ಸುಖವಾಗಿ ಬಾಳುತ್ತಿದ್ದನು ?

ಈ ಕೆಳಗೆ ಕೊಟ್ಟಿರುವ ಸಾಹಿತಿಗಳ ಬಗ್ಗೆ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : 2 × 1 = 2

42. ಗೊರೂರು ರಾಮಸ್ವಾಮಿ ಅಯ್ಯಂಗಾರ್

43. ನಾ. ಮೊಗಸಾಲೆ

44. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಕಾಲನ ದೂತರು ಕಾಲ್ಪಿಡಿದೆಳೆದಾಗ

ಸುಳ್ಳು ಸಂಸಾರ ಸುಳಿಗೆ ಸಿಕ್ಕಲು ಬೇಡ ॥

ಅಥವಾ

ಸುಳಿ ಮಿಂಚಿನ ಸೆಳೆ ಮುಂಗಾರಿನ ಮಳೆ

ಕವಿವರ ರತ್ನಾಕರನ ಕೆರೆ ॥

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : 4 × 3 = 12

45. "ಉಪಾಯವಿಲ್ದೆ ಇದ್ರೆ ಅಪಾಯವೇ."

46. "ಕೊಂಡ್ಹೋಗೊ ಎನ್ನ ತವರೀಗೆ."

47. “ತಾನು ಏನು ಅಲ್ವೋ ಅದನ್ನು ಮಾಡೋದೇ ಅಭಿನಯ.”

48. “ಇದು ಬ್ರಹ್ಮಾಂಡ – ನೂರು ಭಾಷೆಗಳ ನವಖಂಡ”.

49. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಅರ್ಥವಿಲ್ಲದ ಒದು ವ್ಯರ್ಥ
— ಮನಸಿದ್ದರೆ ಮಾರ್ಗ
— ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ ?

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಪೂರ್ಣಿಮಾಳು ಮಾಡಿದ ಉರುಳು ಸೇವೆಯನ್ನು ವಿವರಿಸಿ.

— ಶಾಸ್ತ್ರಿಗಳ ಸೊಸೆ ನೀರು ತರಲು ಹೋದ ಬಾವಿಯ ಪರಿಸರ ಏಕೆ ಭಯಾನಕವಾಗಿತ್ತು ?

— ವಚನಕಾರ್ತಿ ಶಾಂತಾದೇವಿ ಕೆ. ಸಾಬಾದಿಯವರು ಧ್ಯಾನದ ಮಹತ್ವವನ್ನು ಹೇಗೆ ನಿರೂಪಿಸಿದ್ದಾರೆ ?

50.

51.

52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

— ಬಿ.ವಿ. ಕಾರಂತರು ನಿರ್ದೇಶಿಸಿದ ನಾಟಕ ಮತ್ತು ಚಲನಚಿತ್ರಗಳನ್ನು ಕುರಿತು ಬರೆಯಿರಿ.

— ‘ಮಾನವ ಜನ್ಮ ದೊಡ್ಡದು’ ಈ ಕೀರ್ತನೆಯ ಸಾರಾಂಶ ಬರೆಯಿರಿ.

53. ನೀವು ಹಾಸನದ 'ವಿದ್ಯಾನಗರದ' ನಿವಾಸಿ ಶಾರದಾ ಎಂದು ಭಾವಿಸಿ, ಬೆಂಗಳೂರಿನ ರಾಜಾಜಿನಗರದಲ್ಲಿ ವಾಸಿಸುತ್ತಿರುವ, ಗೆಳತಿ ಮಮತಾಳಿಗೆ, ಹುಟ್ಟು ಹಬ್ಬಕ್ಕೆ ಆಮಂತ್ರಿಸಿ ಒಂದು ಪತ್ರ ಬರೆಯಿರಿ.

1 × 5 = 5

ಅಥವಾ

ನೀವು ಮೈಸೂರಿನ 'ದೇವಿಕಾ ಪ್ರೌಢಶಾಲೆ'ಯಲ್ಲಿ ಓದುತ್ತಿರುವ 'ವಿನಾಯಕ' ಎಂದು ಭಾವಿಸಿ, ಅಣ್ಣನ ಮದುವೆಯಲ್ಲಿ ಭಾಗವಹಿಸಲು, 3 ದಿನಗಳ ರಜೆ ಕೋರಿ ಶಾಲಾಮುಖ್ಯೋಪಾಧ್ಯಾಯರಿಗೆ ಒಂದು ರಜಾ ಅರ್ಜಿ ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ವರದಕ್ಷಿಣೆ
— ದೂರದರ್ಶನದ ಉಪಯೋಗಗಳು
— ಕ್ರೀಡೆಗಳು